# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1007 |
| 2 | ಸದಸ್ಯರ ಹೆಸರು | : | ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | : | 12-03-2026 |
| 4 | ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಡಿವೈಎಸ್‌ಪಿ ಹುದ್ದೆಗಳಿಗೆ ಪದೋನ್ನತಿ ಮತ್ತು ನೇರ ನೇಮಕಾತಿಗೆ ನಿಗಧಿಪಡಿಸಿದ ಹುದ್ದೆಗಳ ಪ್ರಮಾಣವು 50:50 ಇದ್ದು, ನಂತರ 66:33ಕ್ಕೆ ಇಳಿಸಲಾಗಿದ್ದು, ತದನಂತರ 80:20 ಪ್ರಮಾಣಕ್ಕೆ ಯಾವ ನಿಯಮದ ಆಧಾರದ ಮೇಲೆ ಇಳಿಕೆ ಮಾಡಲಾಗಿದೆ; (ಇಲಾಖಾ ಆದೇಶಗಳ ಸಹಿತ ವಿವರ ನೀಡುವುದು) | ಕರ್ನಾಟಕ ರಾಜ್ಯ ಪೊಲೀಸ್ ಸೇವೆಗಳಿಗೆ ಸಂಬಂಧಿಸಿದಂತೆ ಅಧಿಸೂಚನೆ ಸಂ. ಜಿಎಡಿ 36 ಜಿಆರ್‌ಆರ್ 57, ದಿನಾಂಕ:08.07.1960 ರಲ್ಲಿ ಡಿವೈಎಸ್‌ಪಿ(ಸಿವಿಲ್) ವೃಂದದ ಮಂಜೂರಾತಿ ಬಲದಲ್ಲಿ ನೇರ ಮತ್ತು ಮುಂಬಡ್ತಿ ಹುದ್ದೆಗಳನ್ನು 50:50 ಅನುಪಾತದಲ್ಲಿ ನೇಮಕ ಮಾಡಲು ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಅಳವಡಿಸಲಾಗಿರುತ್ತದೆ.<br><br>ತದನಂತರ ಅಧಿಸೂಚನೆ ದಿನಾಂಕ:06.10.1967 ರಲ್ಲಿ ಡಿವೈಎಸ್‌ಪಿ(ಸಿವಿಲ್) ವೃಂದದ ಮಂಜೂರಾತಿ ಬಲದಲ್ಲಿ ನೇರ ಮತ್ತು ಮುಂಬಡ್ತಿ ಹುದ್ದೆಗಳನ್ನು 33.1/3 : 66.2/3 ಅನುಪಾತದಲ್ಲಿ ನೇಮಕ ಮಾಡಲು ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಅಳವಡಿಸಲಾಗಿರುತ್ತದೆ.<br><br>ಪ್ರಸ್ತುತ ಅಧಿಸೂಚನೆ ಸಂ. ಹೆಚ್‌ಡಿ 162 ಪೊಸಿಅ 2003, ದಿನಾಂಕ:23.12.2004 ರಲ್ಲಿ ಡಿವೈಎಸ್‌ಪಿ(ಸಿವಿಲ್) ವೃಂದದ ಮಂಜೂರಾತಿ ಬಲದಲ್ಲಿ ನೇರ ಮತ್ತು ಮುಂಬಡ್ತಿ ಹುದ್ದೆಗಳನ್ನು 20:80 ಅನುಪಾತದಲ್ಲಿ ನೇಮಕ ಮಾಡಲು ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಅಳವಡಿಸಲಾಗಿರುತ್ತದೆ.<br><br>ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸರ್ಕಾರದ/ಇಲಾಖೆಯ ನೀತಿ ಮತ್ತು ಅವಶ್ಯಕತೆಗೆ ಅನುಗುಣವಾಗಿ ಅಳವಡಿಸಲಾಗಿರುತ್ತದೆ.<br><br>ಅದರಂತೆ, ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಡಿವೈಎಸ್‌ಪಿ(ಸಿವಿಲ್) ವೃಂದದ ಅಧಿಕಾರಿಗಳನ್ನು ನೇರ ಮತ್ತು ಮುಂಬಡ್ತಿ ಮೂಲಕ ಭರ್ತಿ ಮಾಡಲಾಗುತ್ತದೆ. |
| ಆ) | ತೆಲಂಗಾಣ ಮತ್ತು ಆಂದ್ರಪ್ರದೇಶ ರಾಜ್ಯಗಳಲ್ಲಿ ಡಿವೈಎಸ್‌ಪಿ ನೇಮಕಾತಿಗೆ ಶೇಕಡ 66.1/3 : 33.2/3 ಅನುಪಾತದಲ್ಲಿದ್ದು, ಕರ್ನಾಟಕ ರಾಜ್ಯದಲ್ಲಿ ಡಿವೈಎಸ್‌ಪಿ ನೇರ ನೇಮಕಾತಿಗೆ ಶೇಕಡ 20ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ನಿಗಧಿಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಕಾರಣ ಸಹಿತ ವಿವರ ನೀಡುವುದು); | |
| ಇ) | ಡಿವೈಎಸ್‌ಪಿ ಹುದ್ದೆಗಳಿಗೆ ಸಂಬಂಧಿಸಿದಂತೆ ವೇಕೆನ್ಸಿ ರಿಜಿಸ್ಟರ್ ನಲ್ಲಿ ತಪ್ಪುಗಳಾಗಿರುವುದು ನಿಜವೇ; | ಸರ್ಕಾರದ ಅಧಿಸೂಚನೆ ಸಂ.ಹೆಚ್‌ಡಿ 268 ಪಿಇಜಿ 2021, ದಿನಾಂಕ:27.01.2022 ರಲ್ಲಿ ದಿನಾಂಕ:01.1.2021ರಲ್ಲಿದ್ದಂತೆ ಡಿವೈಎಸ್‌ಪಿ(ಸಿವಿಲ್) |

<table>
<tr>
<td></td>
<td>ಸದರಿಯವರ ಜೇಷ್ಠತಾ ಪಟ್ಟಿಯಲ್ಲಿ ನ್ಯೂನತೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಜೇಷ್ಠತಾ ಪಟ್ಟಿಯನ್ನು ಬೇಕೆಂದು ತಪ್ಪು ಮಾಡಿರುವ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗುವುದೇ;</td>
<td rowspan="3">ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿ, ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಶೀಲಿಸಿ, ಅಧಿಸೂಚನೆ ಸಂ.ಹೆಚ್‌ಡಿ 268 ಪಿಇಜಿ 2021, ದಿನಾಂಕ:07.03.2022 ರಲ್ಲಿ ಅಂತಿಮಗೊಳಿಸಲಾಗಿರುತ್ತದೆ. ಆದರೆ ಸದರಿ ಜೇಷ್ಠತಾ ಪಟ್ಟಿಯಲ್ಲಿ ಮುಂಬಡ್ತಿ ಹೊಂದಿರುವ ಡಿವೈಎಸ್‌ಪಿ ಸಂಖ್ಯೆ ಹೆಚ್ಚಾಗಿರುವುದಾಗಿ ಮತ್ತು ಬ್ಲಾಕ್ ವಾರು ರಿಕ್ತ ಸ್ಥಾನದ ಮಾಹಿತಿಯನ್ನು ಪ್ರಕಟಿಸದೇ ಇರುವ ಸಂಬಂಧ ಶ್ರೀಮತಿ ಅನುಷಾ ಮತ್ತು ಇತರರು ಮಾನ್ಯ ಕೆಎಸ್‌ಎಟಿ ಯಲ್ಲಿ ಅರ್ಜಿ ಸಂ.5238-5263/2023 ನ್ನು ದಾಖಲಿಸಿರುತ್ತಾರೆ.<br><br>ಸದರಿ ಅರ್ಜಿಯ ವಿಚಾರಣೆಯನ್ನು ನಡೆಸಿದ ನ್ಯಾಯಾಲಯವು ದಿನಾಂಕ:06.02.2025ರ ಅಂತಿಮ ಆದೇಶದಲ್ಲಿ ಈ ಕೆಳಕಂಡಂತೆ ನಿರ್ದೇಶಿಸಿರುತ್ತದೆ:-<br>i. The applications are allowed.<br>ii. The impugned seniority list bearing No. HD 268 PEG 2021, dated: 07.03.2022 placed at Annexure-A10 prepared by respondent No. 1 is quashed.<br>iii. Respondents are directed to consider the objections raised by the applicants and redo the seniority list in accordance with guidelines issued by Government in Official Memorandum dated: 06.07.1976 and 14.12.1987.<br>iv. The respondents are directed to publish block wise vacancy position with effect from 2012 along with revised vacancy in each Category of Promotion and direct recruitment quota.<br>v. Respondent No 1 are directed not to issue any promotion from the cadre of Deputy Superintendent of Police to Superintendent of Police on the basis of impugned seniority list dated: 07.03.2022 (Annexure-A10) which is quashed forthwith.<br><br>ಮಾನ್ಯ ಕೆಎಸ್‌ಎಟಿಯು ಅರ್ಜಿ ಸಂ.5238-5263/2023ರಲ್ಲಿ ದಿನಾಂಕ:06.02.2025ರಂದು ನೀಡಿದ ತೀರ್ಪಿನನ್ವಯ ಡಿವೈಎಸ್‌ಪಿ (ಸಿವಿಲ್) ವೃಂದದ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಲು ಸದರಿ</td>
</tr>
<tr>
<td>ಈ)</td>
<td>ಸಿ ಅಂಡ್ ಆರ್ ನಿಯಮದಡಿಯಲ್ಲಿ ಡಿವೈಎಸ್‌ಪಿಗಳಿಗೆ 2007, 2008, 2010 ರಲ್ಲಿ ನೇರ ನೇಮಕಾತಿ ಮೂಲಕ ನೇಮಕವಾಗಿರುವವರಿಗೆ 5 ವರ್ಷದಲ್ಲಿ ಮುಂಬಡ್ತಿ ನೀಡಲಾಗಿದ್ದು, 2017ರಲ್ಲಿ ನೇಮಕವಾಗಿರುವವರಿಗೆ ಇದುವರೆಗೆ ಮುಂಬಡ್ತಿ ನೀಡದೆ ಇರಲು ಕಾರಣಗಳೇನು; (ವಿವರ ನೀಡುವುದು)<br>ರಾಜ್ಯದಲ್ಲಿ ಐ.ಪಿ.ಎಸ್ ಅಧಿಕಾರಿಗಳಿಗೆ ಮಾತ್ರ ಪ್ರತಿವರ್ಷ ಡಿಸೆಂಬರ್ 31 ರಂದು ಜೇಷ್ಠತಾ ಪಟ್ಟಿ ತಯಾರಿಸಿ ಮುಂಬಡ್ತಿ ನೀಡಲಾಗುತ್ತಿದ್ದು, ಡಿವೈಎಸ್‌ಪಿ ಗಳಿಗೆ ಪ್ರತಿ ವರ್ಷ ಡಿವೈಎಸ್‌ಪಿಗಳ ಜೇಷ್ಠತಾ ಪಟ್ಟಿ ತಯಾರಿಸಿ, ಮುಂಬಡ್ತಿ ನೀಡದೆ ಇರಲು ಕಾರಣಗಳೇನು: ಇದರಿಂದ ರಾಜ್ಯದಿಂದ ನೇರ ನೇಮಕಾತಿ ಆಗಿರುವ ಡಿವೈಎಸ್ ಪಿಗಳಿಗೆ ಮುಂಬಡ್ತಿ ನೀಡದೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕೂಡಲೇ ಮುಂಬಡ್ತಿ ನೀಡಲಾಗುವುದೇ;</td>
</tr>
<tr>
<td>ಉ</td>
<td>ಕೆ.ಎ.ಟಿ ನ್ಯಾಯಾಲಯದ ಆದೇಶದಂತೆ ದಿ:30-07-2025 ರಂದು ರಚಿಸಲಾಗಿರುವ ಏಕ ಸದಸ್ಯ ಪೀಠವು ಕಾರ್ಯನಿರ್ವಹಿಸುತ್ತಿದ್ದು, ನ್ಯಾಯಾಲಯದ ಆದೇಶ ಬಂದು 10 ತಿಂಗಳು ಆಗಿದ್ದು ಪೀಠವು ಎಷ್ಟು ದಿನದಲ್ಲಿ ವರದಿಯನ್ನು ಪಡೆದು ಜೇಷ್ಠತಾ ಪಟ್ಟಿಯನ್ನು ಯಾವಾಗ ಸಿದ್ಧಪಡಿಸಲಾಗುತ್ತದೆ ಹಾಗೂ ಮುಂಬಡ್ತಿ ನೀಡಲು ಕ್ರಮ ಕೈಗೊಳ್ಳಲಾಗುತ್ತದೆ?</td>
</tr>
</table>

| | | |
|---|---|---|
| | | ವಿಷಯದಲ್ಲಿ ಪರಿಣಿತಿ ಹೊಂದಿರುವ ಶ್ರೀ ಬಿ.ಕೆ. ಚಿನ್ನಮಾರಯ್ಯ, ನಿವೃತ್ತ ಸಮಾಜ ಕಲ್ಯಾಣಾಧಿಕಾರಿ ರವರನ್ನು ಸಲಹೆಗಾರರನ್ನಾಗಿ ನೇಮಿಸಿ ಆದೇಶಿಸಲಾಗಿದೆ. ಅದರಂತೆ ಸದರಿ ನಿವೃತ್ತ ಅಧಿಕಾರಿಯವರು ದಿನಾಂಕ:08.09.2025 ರಿಂದ ವಹಿಸಲಾದ ಕರ್ತವ್ಯವನ್ನು ಪ್ರಾರಂಭಿಸಿದ್ದು, ಡಿವೈಎಸ್‌ಪಿ (ಸಿವಿಲ್) ವೃಂದದ ವಹಿಗಳನ್ನು ಪರಿಷ್ಕರಿಸಲು ಪೂರ್ಣವಾಗಿ ದಾಖಲೆಗಳು ಸಂಗ್ರಹವಾಗಿರುವುದಿಲ್ಲವಾದ್ದರಿಂದ ಹಾಗೂ ವೇಕೆನ್ಸಿ ವಹಿಯನ್ನು ಇಲ್ಲಿಯವರೆಗೆ ಸಂಗ್ರಹಿಸಿರುವ ಆದೇಶ/ದಾಖಲೆವಾರು ಮತ್ತು ದಿನಾಂಕ: 01.11.1956 ರಿಂದ 1982ರವರೆಗೆ ಹಾಗೂ ತದನಂತರ, 2021-22 ರವರೆಗೆ ಹೊರಡಿಸಿರುವ ಜೇಷ್ಠತಾ ಪಟ್ಟಿಗಳ ಮಾಹಿತಿವಾರು ತಯಾರಿಸುವುದು ಅನಿವಾರ್ಯವಾಗಿರುವುದರಿಂದ ಡಿವೈಎಸ್‌ಪಿ (ಸಿವಿಲ್) ವೃಂದದ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಲು $2^{1/2}$ ತಿಂಗಳ ಅವಧಿಗೆ ವಿಸ್ತರಿಸಿದ್ದು, ಪುನಃ ಕಾಲಾವಧಿಯನ್ನು ಅಂತಿಮವಾಗಿ ದಿನಾಂಕ: 09.03.2026 ರವರೆಗೆ ವಿಸ್ತರಿಸಿ ಆದೇಶಿಸಲಾಗಿರುತ್ತದೆ.<br><br>ಆದ್ದರಿಂದ, ಮಾನ್ಯ ಕೆಎಸ್‌ಎಟಿ ಅರ್ಜಿ ಸಂ.5238-5263/2023ರ ದಿನಾಂಕ: 06.02.2025ರ ಆದೇಶದನ್ವಯ ಡಿವೈಎಸ್‌ಪಿ(ಸಿವಿಲ್) ವೃಂದದ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸುವ ಪ್ರಕ್ರಿಯೆಯು ಚಾಲ್ತಿಯಲ್ಲಿದ್ದು, ಪೂರ್ಣಗೊಂಡ ನಂತರ ಅರ್ಹತೆಯ ಮೇರೆಗೆ ಪೊಲೀಸ್ ಅಧೀಕ್ಷಕರು (ಸಿವಿಲ್) (ನಾನ್ ಐಪಿಎಸ್) ವೃಂದಕ್ಕೆ ಮುಂಬಡ್ತಿ ನೀಡಲು ಕ್ರಮ ಕೈಗೊಳ್ಳಲಾಗುತ್ತದೆ. |

ಸಂಖ್ಯೆ: ಒಇ 130 ಪಿಇಜಿ 2026

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು